ರಾಯಣ್ಣನಿಗೆ ಈಗ ರಾತ್ರಿ ಹಗಲುಗಳೆಲ್ಲ ಒಂದೇ ಆಗಿದ್ದವು. ಮೊದಮೊದಲು ನೋಡಲು ಕಟ್ಟುಮಸ್ತಾಗಿದ್ದವನು ಈಗ ಯಾರಿಗೂ ಗುರುತು ಸಿಗದಷ್ಟು ಸಣಕಲಾಗಿದ್ದ. ಓದಲು ಕುಳಿತಾಗೆಲ್ಲ ಅವ್ವ, ಅಪ್ಪನನ್ನೊಮ್ಮೆ ನೆನೆಸಿಕೊಂಡು ಧೈರ್ಯ ತಂದುಕೊಳ್ಳುತ್ತಿದ್ದ. ಆದರೂ ಈ ನಿದ್ರೆ ಬಾರದ ರಾತ್ರಿಗಳು, ಅಸಂಬದ್ಧ ಕನಸುಗಳು, ಹೆಸರಿಲ್ಲದ ಸಂಕಟ ಎಲ್ಲವೂ ಸೇರಿ

'ನಾನ್ಯಾಕಿಲ್ಲಿ ಹಿಂಗ ನನ್ನವರಲ್ಲದ ಜನಗಳ ನಡಕ ಹಿಂಗ ಬದುಕಬೊಕು?

ಹಂಗಾರ ಎಕ್ಸಾಮ್ಸ್ ಬರದು ಪಾಸ್ ಆದ್ರಷ್ಟೇ ನಾ ಶಾಣೆನಾ?

ಮಂದ್ಯಾಗ ಮುಖ ಎತ್ತಿ ಬದುಕಬೊಕಂದ್ರ ಮಾರ್ಕ್ಸ್‌ಗಳೇ ಬೇಕಾ?'

ಅಂದುಕೊಂಡು ಹೊರಳಾಡುತ್ತ ಮತ್ತೊಮ್ಮೆ ತನ್ನ ಆಲೋಚನೆಗಳಿಗೆ ತಾನೆ ಶಪಿಸಿ 'ಇಲ್ಲಿಲ್ಲ.... ರಾಯಣ್ಣ ನೀ ಹಿಂಗ ಯೋಚನಿ ಮಾಡಿಕ್ಯಂತ ಕುಂತ್ರ ಕೆಲಸಾಗಂಗಿಲ್ಲ. ನೀ ಓದಿ ಮಾರ್ಕ್ಸ್ ತೆಗಿಯಾಕಬೇಕು ನೌಕರಿ ಹಿಡಿಬೊಕು. ಅಪ್ಪ ಅವ್ವ ಇಷ್ಟು ಓದಿಸಿದ್ದಕ್ಕೂ ನಾಕ ಮಂದಿ ಮುಂದ ತಲಿ ಎತ್ತಿ ಬದುಕಬೊಕು'. ಅಂತ ಮನಸ್ಸಿನಲ್ಲೇ ಅಂದುಕೊಂಡು ಮತ್ತೆ ಗ್ರಂಥಾಲಯದ ಹಾದಿ ಹಿಡಿದ. ಪರೀಕ್ಷೆ ದಿನಗಳು ಸಮೀಪಿಸಿದಂತೆ ರಾಯಣ್ಣನ ಓದು ತೀವ್ರವಾಯಿತು, ಅವನೊಳಗಿನ ಭವಿಷ್ಯದ ಚಿಂತೆಯೂ ಕೂಡ!

* * *

ಈಗ ಪರೀಕ್ಷೆಗಳು ಮುಗಿದು ರಿಸಲ್ಟ್ ಬರುವುದಿತ್ತು..

ಮೊಬೈಲ್ ಹಿಡಿದು ರಾತ್ರಿಯಿಂದ ರಿಸಲ್ಟ್ ನೋಟಿಫಿಕೇಶನ್‌ಗೆ ಕಾಯುತ್ತಿದ್ದ ರಾಯಣ್ಣ ಲೈಬ್ರರಿಯ ಡೆಸ್ಕಿನಲ್ಲಿ ಕುಂತು ಮತ್ತೆ ಫೋನ್‌ನಲ್ಲಿ ನೋಟಿಫಿಕೇಶನ್‌ಗಳನ್ನ ಜಾಲಾಡತೊಡಗಿದ. ಮಧ್ಯಾಹ್ನವಾದರೂ ರಿಸಲ್ಟ್ ಬರಲಿಲ್ಲ. 'ಯಪ್ಪಾ ದೇವರೇ ರಿಸಲ್ಟ್ ಬೇಗ ಬರಲಪ್ಪ...ನನ್ನ ಜೀವನಾನ ಇದರ ಮ್ಯಾಗ ನಿಂತೈತಿ, ಕಾಲು ಕೈ ನಿತ್ರಾಣ ಆದಂಗಾಗ್ಯಾವ, ಇದೊಂದು ಅನಕಂಡಂಗ ಆಗಿಬುಟ್ರ ಅಪ್ಪಅವ್ವಗ ನಿರಾಳ ಆಕ್ಕೈತಿ, ನಾ ಊರಿನ ಮಕ ನೋಡಂಗಾಕ್ಕೈತಿ' ಅಂದುಕೊಳ್ತಾ ಡೆಸ್ಕಿನ ಮುಂದಿನ ಚೇರ್‌ನಲ್ಲಿ ಗಟ್ಟಿಯಾಗಿ ಕುಳಿತ. 'ರಿಸಲ್ಟ್ಸ್ ಟು ಬಿ ಸೂನ್...ರಿಸಲ್ಟ್ಸ್ ಟು ಬಿ ಇನ್ ಒನ್ ಅವರ್' ಅನ್ನೋದನ್ನ ಓದಿದಾಗೆಲ್ಲ ಹೊಟ್ಟೆಯೊಳಗಿನ ನರಕ್ಕೆ ಚೂಪಾದ ಕತ್ತಿ ತಾಕಿದಂತಾಗಿ ಕೈಕಾಲುಗಳನ್ನು ಅಲುಗಾಡಿಸುತ್ತಾ ಕುಳಿತ. ಡೆಸ್ಕ್‌ಗೆ ಅಂಟಿಸಿದ್ದ ಟೈಂ ಟೇಬಲ್, ದಿನಾಲೂ ಗೀಚಿ ಬರೆಯುತ್ತಿದ್ದ ರಫ್ ಪೇಪರ್ಸ್, ನೀಟಾಗಿ ಬರೆದಿದ್ದ ನೋಟ್ಸ್‌ಗಳೆಲ್ಲವನ್ನೂ ದಿಟ್ಟಿಸುತ್ತಾ ಕುಳಿತ, ಗೊತ್ತಿಲ್ಲದ ಭಾವವೊಂದು ಈ ಪುಸ್ತಕ ಹಾಳೆ ಮಸಿ ಡೆಸ್ಕ್‌ಗಳೊಂದಿಗೆ ಬೆಸೆದಿದೆ ಎಂಬಂತೆ ಎಲ್ಲವನ್ನೂ ನಿಧಾನವಾಗಿ ಕೈಯಿಂದ ನೇವರಿಸುತ್ತಾ ಕುಳಿತ, ಅವ್ವನ ಬೆರಳು ತಲೆ ಸವರಿದಂತಾಗಿ ಅಲ್ಲೇ ನಿದ್ದೆಗೆ ಜಾರಿದ. ಹೊರಗಡೆ ಮಳೆ ಧಾರಾಕಾರವಾಗಿ ಬರತೊಡಗಿತ್ತು, ದಡಬಡಿಸಿ ಎದ್ದ ರಾಯಣ್ಣ ಫೋನ್ ಹಿಡಿದವನೇ ನೋಟಿಫಿಕೇಶನ್‌ಗಾಗಿ ಮತ್ತೆ ಹುಡುಕಿದ 'ಲೇ ರಾಯಾ....ರಿಸಲ್ಟ್ ಏನಾಯ್ತು' ಅನ್ನೋ ಸಾಲು ಸಂದೇಶಗಳಿದ್ದವು. ಮತ್ತದೇ ಭಯ, ತಳಮಳ, ತುದಿಗೆ ನಿಂತು ಬೀಳುವ ಅನುಭವ, ನಡುಗುವ ಕೈನಲ್ಲೆ ರಿಸಲ್ಟ್ ನೋಡಿದ 'ನಾಟ್ ಕ್ವಾಲಿಫೈಡ್' ಅನ್ನೊ ದೊಡ್ಡ ಅಕ್ಷರಗಳು ಕಣ್ಣಿಗೆ ಬಿದ್ದವು. ಕಾಲು ತಣ್ಣಗಾಗಿ, ಗಂಟಲಿನ ಏರಿಳಿತ ಸ್ತಬ್ಧವಾಯಿತು, ಸುತ್ತ ಆವರಿಸಿದ ಗಾಢ ಮೌನ ಬಿಕ್ಕತೊಡಗಿತು ಆದರೆ ಶಬ್ಧವಿರಲಿಲ್ಲ. ಅಲ್ಲಿಂದ ಎದ್ದವನೇ ಮಳೆಯಲ್ಲಿ ನಡೆದ ರೂಮಿಗೆ ಸಮೀಪಿಸಿ ಟೇರೆಸ್‌ನ ಅಂಚಿಗೆ ಒರಗಿ ನಿಂತ. ಕೇಸರಿ ಹೂ ಬಿಡುವ ಗಿಡ, ಭಾರತಿ ಆಂಟಿ ಪುಟ್ಟ ಮನೆ, ಮಳೆಗೆ ತೊಯ್ದ ಪುಟ್ಟ ಹಣತೆ, ಕುರಿಗಳಿದ್ದ ಜಾಗದಲ್ಲಿ ಬಿದ್ದಿದ್ದ ಕುರಿಯ ಕೂದಲು, ಎಲ್ಲವೂ ನಿಶ್ಯಬ್ದವಾಗಿತ್ತು, ಕೆಳಗೆ ನೋಡಿದಷ್ಟೂ ನೂಕುವರೆಂಬ ಭಾವ, ಬೀಳಬೆಕೆನಿಸಿದರೂ ಹಿಡಿದು ನಿಲ್ಲಿಸಿದ ಯಾವುದೋ ಕೈ! ರಾಯಣ್ಣ ತಟಸ್ಥವಾಗಿದ್ದ. ಅಂಕ, ಪರೀಕ್ಷೆ, ಭ್ರಷ್ಟಾಚಾರ, ಕಾಣದ ಕೈ, ರಾಜಕೀಯ, ಅಪ್ಪ, ಅವ್ವ, ಎಂಬ ನೂರೆಂಟು ಸುಳಿಗಳು ತಲೆಯ ಸುತ್ತ ಸುಳಿದಾಡಿದಂತಾಗಿ ಆಕಾಶ ದಿಟ್ಟಿಸುತ್ತಾ ನಿಂತ. ಸಂಜೆಯಾಗಿ ಕಪ್ಪುದಟ್ಟ ಮೋಡ ಕವಿದಿತ್ತು, ಮೋಡಗಳ ಹಿಂದೆ ಹುಣ್ಣಿಮೆ ಚಂದ್ರನಿದ್ದ...

ಅಲ್ಲಿ ಬೆಳಕಿತ್ತು !ಮತ್ತದರೊಳಗೆ ಮರದಡಿ ಕುಳಿತ ಅವ್ವನ ಚಿತ್ರವಿತ್ತು!

●